5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 22.07.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 5 ಪಿ. ಡಬ್ಲ್ಯೂ:7

| | |
|---|---|
| ಸಾಕ್ಷಿದಾರರ ಹೆಸರು | ಮಹದೇವಮ್ಮ |
| ಗಂಡನ ಹೆಸರು | ಚಿಕ್ಕಣ್ಣ |
| ವಯಸ್ಸು | 40 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಕೃಷ್ಣಗಿರಿ, ತಮಿಳುನಾಡು. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಫ್ರಾಸಾ. 1 ಸಿದ್ದರಾಜು ನನ್ನ ತಮ್ಮ. ಫ್ರಾಸಾ. 4 ನನ್ನ ಚಿಕ್ಕಮ್ಮ. ಫ್ರಾಸಾ. 5 ನನ್ನ ತಂಗಿ. ಫ್ರಾಸಾ. 2 ಮತ್ತು 3 ರವರು ಗೊತ್ತು. ಅವರು ನೆಟ್ಟಕಲ್ಲು ಗ್ರಾಮದವರಾಗಿರುತ್ತಾರೆ. ಫ್ರಾಸಾ.6 ರವರು ಗೊತ್ತಿಲ್ಲ.
2. ಈ ವರುಷದ ಗೌರಿ ಹಬ್ಬಕ್ಕೆ ನನ್ನ ತಾಯಿ ತೀರಿಕೊಂಡು 3 ವರುಷವಾಗುತ್ತದೆ. ಅವರು ತೀರಿಕೊಳ್ಳುವ ಗ್ರಾಮದಲ್ಲಿ ನೆಟ್ಟಕಲ್ಲು ಗ್ರಾಮದಲ್ಲಿ ವಾಸವಿದ್ದರು. ಅವರೊಂದಿಗೆ, ನಮ್ಮ ತಂದೆ ಮತ್ತು ನನ್ನ ತಮ್ಮ ವಾಸಿಸುತ್ತಿದ್ದರು. ಸದರಿ ಅವರು ವಾಸಿಸುತ್ತಿದ್ದ ಮನೆ ಸ್ವಂತ ಮನೆಯಾಗಿತ್ತು. ಸದರಿ ಮನೆಯನ್ನು ಕಟ್ಟಿಸಿದ ನಂತರ, ನನ್ನ ತಾಯಿ 3 ತಿಂಗಳ ಕಾಲ ಜೀವಂತವಿದ್ದರು. ಸದರಿ ಸಮಯದಲ್ಲಿ ನನ್ನ ತಂದೆ ಕೂಲಿ ಕೆಲಸ ಮಾಡುತ್ತಿದ್ದರು, ಆಡುಗಳನ್ನು ಇಟ್ಟುಕೊಂಡು ಮೇಯಿಸುತ್ತಿದ್ದರು. ನನ್ನ ತಮ್ಮ ಸಿದ್ದರಾಜು ಮೈಸೂರಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ನಮ್ಮ ತಾಯಿ ಮನೆಯಲ್ಲಿ ಇರುತ್ತಿದ್ದರು.
3. ಸದರಿ ಸಮಯದಲ್ಲಿ ನಾನು ತಮಿಳುನಾಡಿನಲ್ಲಿ ಇರುವ ನನ್ನ ಗಂಡನ ಮನೆಯಲ್ಲಿ ಇದ್ದೆನು. ನನ್ನ ತಂಗಿ ಫ್ರಾಸಾ. 5 ರವರು ಮೈಸೂರಿನಲ್ಲಿರುವ ಅವರ ಗಂಡನ ಮನೆಯಲ್ಲಿ ಇದ್ದರು. ಫ್ರಾಸಾ. 1 ಸಿದ್ದರಾಜುವಿಗ ಮದುವೆಯಾಗಿಲ್ಲ.

4. ನನ್ನ ತಾಯಿ ಯಾವ ರೀತಿ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ನನ್ನ ತಾಯಿ ದಾಖಲಾಗಿದ್ದಾರೆ ಎಂದು ನನ್ನ ತಂಗಿಯ ಗಂಡ ಫೋನ್ ಮಾಡಿದ್ದರು. ಮರುದಿನ ನಾನು ಕೆ.ಆರ್.ಆಸ್ಪತ್ರೆಗೆ ಬಂದು ನನ್ನ ತಾಯಿಯನ್ನು ನೋಡಿರುತ್ತೇನೆ. ಆಗ ನನ್ನ ತಾಯಿಯೊಂದಿಗೆ ನನ್ನ ಚಿಕ್ಕಮ್ಮ ಪ್ರಾಸಾ. 4 ಹಾಗೂ ನನ್ನ ತಂಗಿ ಪ್ರಾಸಾ. 5 ರವರು ಇದ್ದರು. ನನ್ನ ತಮ್ಮ ಪ್ರಾಸಾ.1 ರವರು ಸಹ , ಸದರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು.

ನೀವು ನಿಮ್ಮ ತಾಯಿಯನ್ನು ನೋಡಿದಾಗ, ಅವರಿಗೆ ಏನಾಗಿತ್ತು ಎಂದು 3 ಬಾರಿ ಪ್ರಶ್ನೆ ಕೇಳಿದಾಗ ಸಾಕ್ಷಿಯು, ಅವರಿಗೆ ಏನಾಗಿತ್ತು ಎಂದು ನಾನು ಕೇಳಿಲ್ಲ ಎಂದು ಉತ್ತರಿಸುತ್ತಿದ್ದಾರೆ. ನ್ಯಾಯಾಲಯವು ಅಭಿಯೋಜನೆಯು ಕೇಳಿದ ಪ್ರಶ್ನೆಯನ್ನು ಪುನಃ ಸಾಕ್ಷಿಗೆ ಕೇಳಿದಾಗ, ಸಾಕ್ಷಿಯು ನನ್ನ ತಾಯಿ ನೈಟಿ ಹಾಕಿಕೊಂಡಿದ್ದರು, ನಾನು ನೋಡಿಲ್ಲ ಎಂದು ಹೇಳುತ್ತಾರೆ.

5. ಪ್ರಾಸಾ. 1 ರವರ ಕೈಗೆ, ಆಯಿಂಟ್‌ಮೆಂಟನ್ನು ಹಚ್ಚಲಾಗಿತ್ತು, ಆತನೂ ಸಹ ಏನೂ ವಿಚಾರ ಹೇಳಿಲ್ಲ. ನಾನು ಆ ದಿನ ಆಸ್ಪತ್ರೆಯಲ್ಲಿ ಮಧ್ಯಾಹ್ನದ ತನಕ ಇದ್ದು ವಾಪಸ್ಸು ಹೋಗಿರುತ್ತೇನೆ.

6. ಒಂದು ವಾರದ ನಂತರ ನನ್ನ ತಾಯಿಯನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಿ ನೆಟ್ಟಕಲ್ಲಿನಲ್ಲಿ ಇರುವ ಮನೆಗೆ ಕರೆದುಕೊಂಡು ಹೋಗಿದ್ದರು. ಅವರು ಒಂದು ವಾರದ ತನಕ ಜೀವಂತವಿದ್ದರು, ಗೌರಿ ಹಬ್ಬಕ್ಕೆ ಮೂರು ದಿನದ ಹಿಂದೆ ಅವರು ತೀರಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ, ನಮ್ಮ ತಂದೆ ಎಲ್ಲಿದ್ದರು ಎಂದು ನನಗೆ ಗೊತ್ತಿಲ್ಲ. ಪ್ರಾಸಾ.4 ಮತ್ತು 5 ರವರನ್ನು ನಾನು ವಿಚಾರಿಸಿಲ್ಲ, ನನ್ನ ತಾಯಿ ಹೇಗೆ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಈಗಲೂ ನನಗೆ ನನ್ನ ತಾಯಿ ಹೇಗೆ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ.

7. ನಮ್ಮ ತಾಯಿ ತೀರಿಕೊಂಡ ನಂತರ ವಿಚಾರ ಗೊತ್ತಾಗಿ, ನಾನು ನೆಟ್ಟಕಲ್ಲು ಊರಿಗೆ ಬಂದಿದ್ದೆನು. ಬೇರೆ ಎಲ್ಲಿಗೂ ನಾನು ಹೋಗಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ. ನಾನು ಹೇಳಿಕೆಯನ್ನು ನೀಡಿಲ್ಲ.

8. ನ್ಯಾಯಾಲಯದ ಮುಂದೆ ಇರುವ ಆರೋಪಿಯು, ನನ್ನ ತಂದೆಯಾಗಿರುತ್ತಾರೆ. ನನ್ನ ತಂದೆಯ ವಿರುದ್ಧ ಏನು ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

9. ನನ್ನ ತಂಗಿ ಪ್ರಾಸಾ.5 ರವರು ಪೋನ್ ಮಾಡಿ, ಹಿಂದಿನ ದಿನ ರಾತ್ರಿ ನಮ್ಮ ತಂದೆ, ನನ್ನ ತಾಯಿಗೆ ಸೀಮೆಎಣ್ಣೆ ಸುರಿದು, ಬೆಂಕಿ ಹಾಕಿದ್ದು, ಸುಟ್ಟ ಗಾಯಗಳಿಂದ ಕೆ.ಆರ್. ಆಸ್ಪತ್ರೆಯಲ್ಲಿ ದಾಖಾಲಾಗಿದ್ದರು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯಲ್ಲಿ ನನ್ನ ತಾಯಿಯನ್ನು ಖುದ್ದಾಗಿ ನಾನು ವಿಚಾರಿಸಿದ್ದೆನು ಎಂದರೆ ಸರಿಯಲ್ಲ. ದಿಃ 03.08.2022 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನನ್ನ ತಾಯಿ ಮತ್ತು ನನ್ನ ತಮ್ಮ ಮನೆಯ ಹಾಲ್ ನಲ್ಲಿ ಕುಳಿತಿದ್ದಾಗ, ನಮ್ಮ ತಂದೆ ಸದರಿ ಮನೆ ಕಟ್ಟಿಸಿದ ವಿಚಾರದಲ್ಲಿ ಏಕಾಏಕಿ ನುಗ್ಗಿ, ನನ್ನ ತಾಯಿ ಮತ್ತು ತಮ್ಮನಿಗೆ ಅವಾಚ್ಯವಾಗಿ ಬೈದು, ಒಂದು ದೊಣ್ಣೆಗೆ ಬಟ್ಟೆಯನ್ನು ಸುತ್ತಿಕೊಂಡು ಸೀಮೆಎಣ್ಣೆಯನ್ನು ತಾಯಿಯ ಮೇಲೆ ಎರಚಿ ದೊಣ್ಣೆಗೆ ಸುತ್ತಿಕೊಂಡಿದ್ದ ಬಟ್ಟೆಗೆ ಬೆಂಕಿ ಕಡ್ಡಿ ಗೀರಿ, ನನ್ನ ತಾಯಿಗೆ ಹಚ್ಚಿದರೆಂದು , ಆಗ ನನ್ನ ತಮ್ಮ ಬೆಂಕಿ ಹಾರಿಸಲು ಹೋಗಿ ಆತನ ಮುಖ ಮತ್ತು ಎಡತೋಳಿಗೆ ಸುಟ್ಟ ಗಾಯಗಳಾಗಿ, ತಾಯಿಗೆ ಮುಖ, ತೊಡೆ, ಕಾಲುಗಳು ಮತ್ತು ಬೆನ್ನಿಗೆ ಸುಟ್ಟ ಗಾಯಗಳಾಗಿ ಮಳವಳ್ಳಿ ಆಸ್ಪತ್ರೆಗೆ ಕರೆತಂದ ನಂತರ ಕೆ ಆರ್ ಆಸ್ಪತ್ರೆಗೆ ಬಂದಿರುವುದಾಗಿ ನನ್ನ ತಾಯಿ ತಿಳಿಸಿದರು ಎಂದರೆ ಸರಿಯಲ್ಲ.

10. ನನ್ನ ತಾಯಿಯು ಪೋನ್ ಮುಖಾಂತರವಾಗಿ ಹೊಸದಾಗಿ ಮನೆಯನ್ನು ಕಟ್ಟಿಸಿದ ನಂತರ ನಮ್ಮ ತಂದೆ, ನನ್ನ ತಾಯಿ ಜೊತೆ ಸದರಿ ಮನೆಯನ್ನು ನಾನು ಕಟ್ಟಿಸಿದ್ದೇನೆ, ಇದು ನನ್ನದು, ನಾನು ಸಾಕುತ್ತಿರುವ ಆಡುಗಳೂ ನನ್ನದು ಎಂದು ಬೈಯುತ್ತಿದ್ದರೆಂಬ ವಿಚಾರವನ್ನು ನನಗೆ ಹೇಳಿದ್ದರು ಎಂದರೆ ಸರಿಯಲ್ಲ.

11. ನನ್ನ ತಾಯಿಯನ್ನು ಆಸ್ಪತ್ರೆ ಯಿಂದ ಬಿಡುಗಡೆ ಗೊಳಿಸಿ ನೆಟ್ಟಕಲ್ಲು ಗ್ರಾಮಕ್ಕೆ ಬಂದಾಗ ನಾನೂ ಸಹ ನನ್ನ ಜೊತೆಯಲ್ಲಿ ನೆಟ್ಟಕಲ್ಲು ಗ್ರಾಮದಲ್ಲಿ ಇದ್ದೆನು ಎಂದರೆ ಸರಿ. ತಾಯಿಯ ಶವ ಪಂಚನಾಮೆಯ ಕಾಲದಲ್ಲಿಯೂ ಸಹ, ನನ್ನ ತಾಯಿಯ ಮರಣದ ಕಾರಣವನ್ನು ಪೊಲೀಸರಿಗೆ ಹೇಳಿದ್ದೆನು ಎಂದರೆ ಸರಿಯಲ್ಲ. ದಿಃ 02.09.2022 ರಂದು ಪೊಲಿಸೇರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ '' ನನ್ನ ತಂದೆ ಸಿದ್ದೇಗೌಡ ಹೊಸದಾಗಿ........................................ತಿಳಿಸಿದರು'' ಹಾಗೂ''31.08.20

22 ರಂದು ........................................................................ ಕೊಲೆ ಮಾಡಿರುತ್ತಾರೆ '' ಎಂಬ ಭಾಗಗಳನ್ನು ಅಭಿಯೋಜಕರು ಓದಿ ಹೇಳಿದ್ದು, ಸದರಿ ಹೇಳಿಕೆಯ ಭಾಗಗಳನ್ನು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗಗಳನ್ನು ನಿಪಿ.18 ಮತ್ತು ನಿಪಿ.18(ಎ) ಎಂದು ಗುರುತಿಸಲಾಯಿತು. ಸಾಕ್ಷಿಯ ಶವ ಪಂಚನಾಮೆಯ ಸಮಯದ ಹೇಳಿಕೆಯ ''ನನ್ನ ತಂದೆ ಸಿದ್ದೇಗೌಡ ..........................................ನನ್ನ ತಮ್ಮನನ್ನು ಕೇಳಿ ತಿಳಿದುಕೊಂಡಿರುತ್ತೇನೆ'' ಹಾಗೂ ''ನಮ್ಮ ತಾಯಿ ಮಹದೇವಮ್ಮಳನ್ನು ನನ್ನ ತಂದೆ ಸಿದ್ದೇಗೌಡ ಮೈಮೇಲೆ ಸೀಮೆಎಣ್ಣೆ ಹಾಕಿ ಬೆಂಕಿ ಹತ್ತಿಸಿ ಕೊಲೆ ಮಾಡಿರುತ್ತಾನೆ '' ಎಂಬ ಭಾಗಗಳನ್ನು ಅಭಿಯೋಜಕರು ಓದಿ ಹೇಳಿದ್ದು, ಸದರಿ ಹೇಳಿಕೆಯ ಭಾಗಗಳನ್ನು ಸಾಕ್ಷಿಯು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗಗಳನ್ನು ನಿಪಿ.11(ಬಿ) ಮತ್ತು ನಿಪಿ.11(ಸಿ) ಎಂದು ಗುರುತಿಸಲಾಯಿತು.

12. ನೆಟ್ಟಕಲ್ಲು ಗ್ರಾಮದಲ್ಲಿ ಇರುವ ನಮ್ಮ ಮನೆಯಲ್ಲಿ ಯಾರು ವಾಸ ಇಲ್ಲ. ನನ್ನ ತಮ್ಮ ಸಿದ್ದರಾಜು - ಪ್ರಾಸಾ. 1 ರವರು ಮೈಸೂರಿನಲ್ಲಿ ವಾಸವಿದ್ದಾರೆ. ಪ್ರಾಸಾ. 4, 5 ಮತುತ ನಾವೆಲ್ಲ ಸೇರಿಕೊಂಡು ನನ್ನ ತಮ್ಮ ಸಿದ್ದರಾಜುವಿಗೆ ಮದುವೆ ಮಾಡಿಸಿ ಸದರಿ ನೆಟ್ಟಕಲ್ಲಿರುವ ಮನೆಯಲ್ಲಿ ಅವರ ಸಂಸಾರವನ್ನು ಇರಿಸಸಬೇಕೆಂದು ನಾವು ತೀರ್ಮಾನಿಸಿದ್ದೇವೆ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ನನ್ನ ತಂದೆ, ನಮ್ಮ ತಾಯಿಯ ಮೇಲೆ ಸೀಮೆಎಣ್ಣೆ ಎರಚಿ ಬೆಂಕಿ ಹಚ್ಚಿದ್ದರಿಂದ, ಆಕೆ ತೀರಿಕೊಂಡರು, ಆ ಕಾರಣದಿಂದ, ನನ್ನ ತಂದೆಯ ವಿರುದ್ದ ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಕುಟುಂಬದವರು, ಆರೋಪಿಗೆ ಜಾಮೀನು ಕೊಡಿಸುವ ಪ್ರಯತ್ನವನೂ ಸಹ ಮಾಡಿದೆವು ಎಂದರೆ ಸರಿಯಲ್ಲ. ಆರೋಪಿಯು, ಜೈಲಿನಲ್ಲಿ ಇದ್ದಾರೆಂದು, ನನ್ನ ತಮ್ಮ ಸಿದ್ದರಾಜುವಿಗೆ ಹುಡುಗಿ ಸಿಗುತ್ತಿಲ್ಲ ಎಂದರೆ ಸಾಕ್ಷಿಯು, ನಾವು ಹುಡುಗಿ ಹುಡುಕಲು ಎಲ್ಲೂ ಹೋಗಿಲ್ಲ ಎನ್ನುತ್ತಾರೆ. ನನ್ನ ತಂದೆ, ನಮ್ಮ ತಾಯಿಯ ಮೇಲೆ ಸೀಮೆಎಣ್ಣೆ ಎರಚಿ ಬೆಂಕಿ ಹಚ್ಚಿದ್ದರಿಂದ, ಆಕೆ ತೀರಿಕೂಂಡಿರಝಿ ವಿಚಾರ ಗೊತ್ತಿದ್ದರೂ ಸಹ ಪ್ರಾಸಾ.1 ರವರಿಗೆ ಮದುವೆ ಮಾಡಿಸಿ ಸದರಿ ಮನೆಯಲ್ಲಿ ಇರಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀಮತಿ ಎಸ್ ಎಂ ಬಿ ವಕೀಲರು - Assistant Defence counsel :</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.